# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಲೋಕ್/ಆಡಳಿತ-1/119/2016-17

ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬಹುಮಹಡಿ ಕಟ್ಟಡ,
ಬೆಂಗಳೂರು – 560 001
ದಿನಾಂಕ: 31ನೇ ಜುಲೈ 2021.

## ಸುತ್ತೋಲೆ

ವಿಷಯ:- ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ನಮೂನೆ-I ಮತ್ತು ನಮೂನೆ-II ನ್ನು ಭರ್ತಿ ಮಾಡಿ ದೂರುಗಳನ್ನು ಸಲ್ಲಿಸುವ ಬಗ್ಗೆ

*****

ಸಾರ್ವಜನಿಕ ಸೇವಕರ ದುರ್ನಡತೆಯ ಬಗ್ಗೆ ಹಾಗೂ ಸಾರ್ವಜನಿಕ ಸೇವೆಯಲ್ಲಿ ಉಂಟಾಗುವ ಕುಂದುಕೊರತೆಗಳ ಬಗ್ಗೆ ಕರ್ನಾಟಕ ಲೋಕಾಯುಕ್ತ ನಿಯಮ 1985ರ ನಿಯಮ 4ರನ್ವಯ ಸಾರ್ವಜನಿಕರು ನಮೂನೆ-1 ಮತ್ತು 2 ರಲ್ಲಿ ದೂರು ಸಲ್ಲಿಸುವಾಗ, ನಮೂನೆ-2ರಲ್ಲಿ ಸಲ್ಲಿಸುವ ಅಫಿಡೆವಿಟ್‌ಗೆ ದೃಢೀಕರಣ ಮಾಡಿಸಬೇಕಾಗುತ್ತದೆ.

ಈ ಸಂಸ್ಥೆಯ ಕೇಂದ್ರ ಕಛೇರಿಯಲ್ಲಿ ಉಪ ನಿಬಂಧಕರು (ಆಡಳಿತ)-1 ಇವರು ಎಲ್ಲಾ ನಮೂನೆ-2 ರಲ್ಲಿನ ಪ್ರಮಾಣಪತ್ರವನ್ನು ದೃಢೀಕರಿಸುತ್ತಿದ್ದಾರೆ. ಆದರೆ ಸಾರ್ವಜನಿಕರು ರಾಜ್ಯದ ಇತರ ಜಿಲ್ಲಾ ಲೋಕಾಯುಕ್ತ ಕಛೇರಿಗೆ ಬಂದು ನಮೂನೆ-1 ಮತ್ತು 2 ರಲ್ಲಿ ದೂರು ಸಲ್ಲಿಸುವ ಸಂದರ್ಭದಲ್ಲಿ ಜಿಲ್ಲಾ ಲೋಕಾಯುಕ್ತ ಕಛೇರಿಯ ಅಧಿಕಾರಿಗಳು ನಮೂನೆ-2 ಅನ್ನು ದೃಢೀಕರಿಸದೇ ಹೊರಗೆ ನೋಟರಿಯವರ ಮುಂದೆ ದೃಢೀಕರಿಸಿ ನಂತರ ದೂರು ಸಲ್ಲಿಸಲು ಸೂಚಿಸುತ್ತಿದ್ದಾರೆ ಎಂದು ತಿಳಿದುಬಂದಿರುತ್ತದೆ. ಇದರಿಂದಾಗಿ ನಮೂನೆ-1 ಮತ್ತು 2 ರಲ್ಲಿ ದೂರು ಸಲ್ಲಿಸಲು ಇಚ್ಛಿಸುವ ಸಾರ್ವಜನಿಕರು ದೃಢೀಕರಣಕ್ಕಾಗಿ ಹಣ ಪಾವತಿಸಬೇಕಾಗುವುದಲ್ಲದೇ, ದೂರುದಾರರಿಗೆ ಶೀಘ್ರವಾಗಿ ದೂರು ಸಲ್ಲಿಸಲು ಅನಾನುಕೂಲತೆ ಉಂಟಾಗುತ್ತದೆ.

ಆದುದರಿಂದ, ಗೌರವಾನ್ವಿತ ಲೋಕಾಯುಕ್ತರ ನಿರ್ದೇಶನದಂತೆ ಸಾರ್ವಜನಿಕರಿಗೆ ಅನುಕೂಲವಾಗುವ ಸೇವೆಗಳನ್ನು ವಿಸ್ತರಿಸುವ ಉದ್ದೇಶದಿಂದ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ:-

1. ಪ್ರತೀ ಜಿಲ್ಲಾ ಲೋಕಾಯುಕ್ತ ಕಛೇರಿಯಲ್ಲಿ ಸಾರ್ವಜನಿಕರು ನಮೂನೆ-1 ಮತ್ತು 2 ರಲ್ಲಿ ದೂರು ಸಲ್ಲಿಸಲು ಬಂದಾಗ ದೂರುದಾರರು ನಮೂನೆ-2 ರಲ್ಲಿ ಮಾಡಿರುವ ಪ್ರಮಾಣವನ್ನು ದೃಢೀಕರಿಸಲು, ಜಿಲ್ಲಾ ಲೋಕಾಯುಕ್ತ ಕಛೇರಿಯಲ್ಲಿ ದೂರುದಾರರು ದೂರು ನೀಡಲು ಬರುವ ಸಂದರ್ಭದಲ್ಲಿ ಲಭ್ಯವಿರುವ ಪೊಲೀಸ್ ನಿರೀಕ್ಷಕರು ಹಾಗೂ ಅವರ ದರ್ಜೆಗಿಂತ ಮೇಲಾಧಿಕಾರಿಗಳ ಪೈಕಿ ಹಿರಿಯ ಅಧಿಕಾರಿಗಳು ನಮೂನೆ-2ರಲ್ಲಿ ದೂರುದಾರರು ಪ್ರಮಾಣೀಕರಿಸಿರುವುದನ್ನು ದೂರುದಾರರ ಗುರುತನ್ನು ಖಚಿತಪಡಿಸಿಕೊಂಡು ನಿಯಮಾನುಸಾರ ದೃಢೀಕರಿಸಲು ಅಧಿಕಾರ ನೀಡಲಾಗಿದೆ.

2. ಎಲ್ಲಾ ಜಿಲ್ಲೆಗಳಲ್ಲಿ ಪೊಲೀಸ್ ನಿರೀಕ್ಷಕರು ಹಾಗೂ ಅವರ ಹುದ್ದೆಗಿಂತ ಮೇಲ್ದರ್ಜೆಯ ಅಧಿಕಾರಿಗಳು, ಆಯಾ ಜಿಲ್ಲೆಗಳ ತಾಲ್ಲೂಕುಗಳಿಗೆ ಭೇಟಿ ನೀಡಿದಾಗಲೂ ಸಹ ಸಾರ್ವಜನಿಕರು ನಮೂನೆ-1 ಮತ್ತು 2 ರಲ್ಲಿ ದೂರು ನೀಡಿದಲ್ಲಿ, ನಮೂನೆ-2ರಲ್ಲಿ ಪ್ರಮಾಣೀಕರಿಸಿರುವುದನ್ನು ದೂರುದಾರರ ಗುರುತನ್ನು ಖಚಿತಪಡಿಸಿಕೊಂಡು ನಿಯಮಾನುಸಾರ ದೃಢೀಕರಣ ಮಾಡಲು ಹಾಗೂ ಆ ದೂರುಗಳನ್ನು ಸ್ವೀಕರಿಸಿ, ಸಿಸ್‌ಲಾಕ್ ತಂತ್ರಾಂಶದಲ್ಲಿ ನೊಂದಣಿ ಮಾಡಿ ಕೇಂದ್ರ ಕಚೇರಿಗೆ ಕಳುಹಿಸಿಕೊಡಲು ಅಧಿಕಾರ ನೀಡಲಾಗಿದೆ.

31/7/2021

ನಿಬಂಧಕರು,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು

**ರವರಿಗೆ,**

ಎಲ್ಲಾ ಪೊಲೀಸ್ ಅಧೀಕ್ಷಕರು, ಪೊಲೀಸ್ ಉಪಾಧೀಕ್ಷಕರು ಮತ್ತು ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ರವರಿಗೆ ಸೂಕ್ತ ಕ್ರಮಕ್ಕಾಗಿ

**ಪ್ರತಿಯನ್ನು:-**

1) ಅಪರ ಪೊಲೀಸ್ ಮಹಾ ನಿರ್ದೇಶಕರು, ಕಲೋ, ಬೆಂಗಳೂರು
2) ಗೌರವಾನ್ವಿತ ಲೋಕಾಯುಕ್ತರ ಕಾರ್ಯದರ್ಶಿಗಳು, ಬೆಂಗಳೂರು,
2) ಗೌರವಾನ್ವಿತ ಲೋಕಾಯುಕ್ತರ ಆಪ್ತ ಸಹಾಯಕರು, ಬೆಂಗಳೂರು,
3) ಗೌರವಾನ್ವಿತ ಉಪಲೋಕಾಯುಕ್ತ-1 ಮತ್ತು 2 ರವರ ಆಪ್ತ ಸಹಾಯಕರು,
4) ಉಪ ನಿಬಂಧಕರು (ಆಡಳಿತ) 1 ಮತ್ತು 2.